# ನನ್ನ ಆಯ್ಕೆ

ನನ್ನ ಆಯ್ಕೆ (My choice) ಎಂಬ ದೀಪಿಕಾ ಪಡುಕೋಣೆಯ 2.34 ನಿಮಿಷಗಳ ಒಂದು ವೀಡಿಯೊ ಇತ್ತೀಚೆಗೆ ಸುದ್ದಿ ಮಾಡಿತು. ಆ ಸಾಕ್ಷ್ಯ ಚಿತ್ರದ ಉದ್ದೇಶವೇನು ಎಂಬುದು ಸ್ಪಷ್ಟವಾಗಿದೆ. ಹೆಣ್ಣು ತನ್ನ ದೇಹ ಮತ್ತು ಮನಸ್ಸಿನ ಮೇಲೆ ತನ್ನ ಹಕ್ಕು ಪರಿಪೂರ್ಣ ಎಂಬುದನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸುತ್ತಿದ್ದಾಳೆ. ಅದರ ಒಳಿತು ಕೆಡಕುಗಳನ್ನಲ್ಲ ಅಥವಾ ಅದರ ಪರಿಣಾಮಗಳನ್ನೂ ಅಲ್ಲ. ಅದೊಂದು ಕುರುಡು ಸ್ವಗತ. ವ್ಯಷ್ಟಿ ಪ್ರಜ್ಞೆಯ ಅತಿರೇಕ. ಗಂಡಸೆಂಬ ಅಹಂಕಾರವನ್ನು ಹೊತ್ತವನು ಸಹ ಆ ರೀತಿಯ ಅತಿರೇಕಕ್ಕೆ ಒಳಗಾದರೆ ತನಗೂ ಮತ್ತು ಸಮಾಜಕ್ಕೂ ಕೇಡು ಕಟ್ಟಿಟ್ಟ ಬುತ್ತಿ. ಹೆಣ್ಣು ಸರ್ವತಾ ಶೋಷಿತಳು, ಗಂಡೆಂಬ ಅಹಂಕಾರದ ಬಲಿಪಶು, ಎರಡನೇ ದರ್ಜೆಗೆ ಸೀಮಿತವಾದ ವ್ಯಕ್ತಿ ಎಂಬ ಪೂರ್ವಾಗ್ರಹದಿಂದಲೇ ನಿರ್ದೇಶಕ ಹೋಮಿ ಅಡಜಾನಿಯ ಚಿತ್ರವನ್ನು ಹೆಣೆದಂತಿದೆ. ಸೌಂದರ್ಯೋಪಾಸನೆಯ ದೃಷ್ಟಿಯಲ್ಲಿ ಒಂದು ದೃಶ್ಯ ಕಲೆಯಾಗಿ ಚಿತ್ರಕ್ಕೆ ಉತ್ತಮ ಅಂಕ ದೊರಕುತ್ತದೆ. ಆದರೆ ಒಂದು ಚಿತ್ರ, ನಿರ್ಮಾಣದ ನಂತರ ಅಲ್ಲಿಗೆ ನಿಲ್ಲುವುದಿಲ್ಲ. ಅತ್ಯುತ್ತಮ ಸಂಪರ್ಕ ಮಾಧ್ಯಮವಾದ ದೃಶ್ಯ ಕಲೆ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವುದು ಅದು ನೋಡುಗರನ್ನು ತಲುಪಿದಾಗಲೆ. ತನ್ನ ಸಂದೇಶಗಳನ್ನು ಬಿತ್ತರಿಸುತ್ತ, ಪುನರ್‌ನಿರ್ಮಿಸಿಕೊಳ್ಳುತ್ತ, ಪುನರ್ವ್ಯಾಖ್ಯಾನಿಸಿಕೊಳ್ಳುತ್ತಾ ಸಾಗುತ್ತದೆ. ಆಗ ಉಂಟಾಗುವ ಪರಿಣಾಮವೇನು ಎಂಬುದನ್ನು ನಿರ್ದೇಶಕನೊಬ್ಬ ಕಲಾವಿದನಾಗಿ ಮುಂಗಡವಾಗಿ ಯೋಚಿಸಬೇಕಾಗುತ್ತದೆ.

ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ವೇದಕಾಲೀನ ಮಹಿಳೆಯರಾದ 'ಗಾರ್ಗಿ' ಮತ್ತು 'ಮೈತ್ರೇಯಿ' ತಮ್ಮ ಆಯ್ಕೆಯನ್ನು ತಾವೇ ಮಾಡಿಕೊಂಡಿದ್ದರು. ಗಂಡಸಿನ ಅಹಂಕಾರವನ್ನು ವಾದದಲ್ಲಿ ಸೋಲಿಸಿದ್ದರು. ಪುರಾಣ ಕಾಲದ 'ಅಹಲ್ಯೆ' 'ಸೀತೆ' 'ದ್ರೌಪದಿ'ಯರು ಗಂಡಸಿನ ಅಪಪ್ರತಿಷ್ಠೆಯ ಬಲಿಪಶುಗಳಾಗಿದ್ದರು. ಇದು ಏನನ್ನು ಸೂಚಿಸುತ್ತದೆ? ಅಂದಂದಿನ ಸಾಮಾಜಿಕ ಪರಿಸ್ಥಿತಿ ಮತ್ತು ಸಾಂಸ್ಕೃತಿಕ ಪರಿಸರ ಹೆಣ್ಣಾಗಲಿ, ಗಂಡಾಗಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಪ್ರೇರೇಪಿಸುತ್ತವೆ. ಅಷ್ಟೇ ಏಕೆ? ಇತಿಹಾಸ ಪ್ರಸಿದ್ಧ ವಚನಕಾರ್ತಿ ಅಕ್ಕಮಹಾದೇವಿ ಯಾವುದೇ ಹೆಣ್ಣಿಗೆ ಆದರ್ಶನೀಯ ಸ್ಫೂರ್ತಿ. (Ideological inspiration) ತನ್ನ ಆಯ್ಕೆಯನ್ನು ತಾನೇ ಮಾಡಿಕೊಂಡಳು. ನಗ್ನತೆಯನ್ನು ಗೆದ್ದಳು. ಕಾರಣ, ಅದರ ಹಿಂದೆ ಇದ್ದದ್ದು ಸೌಶೀಲ್ಯದಿಂದ ಕೂಡಿದ ನಿರ್ವಿಣ್ಣ ಭಕ್ತಿ. ನಿರ್ವಿಕಾರ ಮನ. ಭಕ್ತಿಯ ಮೂಲಕ ಸಮುದಾಯದ ಮನಸ್ಸನ್ನು ಗೆದ್ದದ್ದು ಆಕೆಯ ಶಕ್ತಿ. ಅನುಭವ ಮಂಟಪಕ್ಕೆ ಕಾಲಿಟ್ಟಾಗ ಕೇಶರಾಶಿಯಿಂದ ಮುಚ್ಚಿದ್ದ ದೇಹವನ್ನು ಕಂಡು ಅಲ್ಲಮನ ಕೀಟಲೆಯ ಪ್ರಶ್ನೆಗೆ ಒಂದು ಕ್ಷಣ ವಿಚಲಿತಳಾದರೂ 'ಆ ಕ್ಷಣ ಕೊಡುವ ಉತ್ತರಕ್ಕೆ ಅಲ್ಲಮನಂಥ ಪ್ರಭುವೇ ತತ್ತರಿಸುತ್ತಾನೆ. ಫಲ ಒಳಗೆ ಪಕ್ವವಾಗಿಯಲ್ಲದೆ, ಹೊರಗಳ ಸಿಪ್ಪೆ ಕೆಡದು, ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂದು ಮುಚ್ಚಿದೆ. ಇದಕ್ಕೆ ನೋವೇಕೆ? ಕಾಡದಿರಣ್ಣಾ, ಚೆನ್ನಮಲ್ಲಿಕಾರ್ಜುನ ದೇವರದೇವನ ಒಳಗಾದವಳ' ಎನ್ನುತ್ತಾಳೆ. ಇದನ್ನು ಕೇಳಿ ನೆರೆದಿದ್ದವರೆಲ್ಲ ಸ್ಥಂಭೀಭೂತರಾಗುತ್ತಾರೆ.

ಹೆಣ್ಣಿನ ಲೈಂಗಿಕ ಪಾವಿತ್ರ್ಯವನ್ನು ಆದರ್ಶೀಕರಿಸುವುದು ಇನ್ನೊಂದು ಅತಿರೇಕ. ಅದು ಒಂದು ಮಾನದಂಡವಾಗುವುದು ಸರಿಯಲ್ಲ. ಗಂಡಿಗಿಲ್ಲದ ಆ ಪಾವಿತ್ರ್ಯವನ್ನು ಹೆಣ್ಣಿನಲ್ಲಿ ಅಪೇಕ್ಷಿಸುವುದು ವ್ಯಕ್ತಿ ಸಮಾನತೆಯ ದೃಷ್ಟಿಯಿಂದ ಅಪಚಾರವಾಗುತ್ತದೆ. ಆದರೆ 'ಇದು ನನ್ನ ದೇಹ, ನನ್ನ ಮನಸ್ಸು, ನನ್ನಿಷ್ಟ. ನನ್ನ ಮದುವೆ ಗಂಡಿನೊಂದಿಗೊ, ಹೆಣ್ಣಿನೊಂದಿಗೊ ಅಥವಾ ಇಬ್ಬರೊಂದಿಗೋ ನನ್ನಿಷ್ಟ. ಮದುವೆಗೆ ಮುಂಚೆ ಕಾಮವೊ ಅಥವಾ ನಂತರವೊ, ಅದು ವಿವಾಹದ ಒಳಗೊ ಅಥವಾ ಹೊರಗೋ ನನ್ನಿಷ್ಟ. ನಾನು ತಡರಾತ್ರಿ ಮನೆಗೆ ಬರುವುದು, ಬೇಗನೆ ಬರುವುದು ನನಗೆ ಬಿಟ್ಟದ್ದು' ಎಂಬಂಥ ಉದ್ದೇಶರಹಿತ ಮಾತುಗಳು ಸ್ವೇಚ್ಛಾಚಾರವೆನ್ನದೆ ಬೇರೆ ದಾರಿಯಿಲ್ಲ. ಇದು ಯಾವ ಸಂದೇಶವನ್ನು ಮಹಿಳೆಯರಿಗೆ ಅಥವಾ ಒಟ್ಟಾರೆ ಸಮಾಜಕ್ಕೆ ನೀಡುತ್ತಿದೆ? ಪ್ರತಿಯೊಬ್ಬ ವ್ಯಕ್ತಿಯ ನಡವಳಿಕೆಯು ತನ್ನ ಬೆರಳ ಗುರುತಿನಷ್ಟೇ ಅನನ್ಯವಾದುದು. ಅದನ್ನು ಸಮಷ್ಟಿಯ ಒಳಿತಿಗೆ ಹರಿಯಬಿಡುವುದೇ ಸಾಂಘಿಕ ಬದುಕಿನ ನಿಯಮ.

ಭಾರತೀಯ ಸಂದರ್ಭಕ್ಕೆ ಬೇರೆಯೇ ಆದ ಸಾಕ್ಷ್ಯಚಿತ್ರಗಳ ಅವಶ್ಯಕತೆಯಿದೆ. 68 ವರ್ಷಗಳ ಸ್ವಾತಂತ್ರ್ಯದ ನಂತರವೂ ಉತ್ತರ ಭಾರತದಲ್ಲಿ ಖಾಪ್ ಪಂಚಾಯಿತಿಗಳೇ ಗ್ರಾಮಸಮಾಜದಲ್ಲಿ (ಅ)ನ್ಯಾಯದಾನ ಮಾಡುತ್ತಿವೆ. ಐಎಫ್‌ಎಸ್ ಮಾಡಿದ ಮಹಿಳೆಗೂ ತನ್ನ ಬಾಳಸಂಗಾತಿಯನ್ನು ಜಾತಿಯ ಎಲ್ಲೆ ಮೀರಿ ಆರಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ. ಆಕೆಯನ್ನು ತಮ್ಮ ಕಟಕಟೆಗೆ ಕರೆತರಬಲ್ಲರು. ಹೂವಿನಂತೆ ಸಾಕಿದ ಹೆಣ್ಣುಮಗಳು ಅನ್ಯ ಜಾತಿಯವನನ್ನು ಪ್ರೇಮಿಸಿ ಮದುವೆಯಾದಳೆಂಬ ಕಾರಣಕ್ಕೆ ಕೊಲೆ ಮಾಡುವ ತಂದೆಯರಿದ್ದಾರೆ, ವಿಷ ಉಣ್ಣಿಸುವ ತಾಯಿಯರಿದ್ದಾರೆ. ಪಂಜಾಬ್ ಹರಿಯಾಣಗಳಲ್ಲಿ ಹೆಣ್ಣು ಭ್ರೂಣ ಹತ್ಯೆಗಳನ್ನು ತಡೆಯುವವರೇ ಇಲ್ಲ. ಇಂಥ ವಿಷಯಗಳಿಗೆ ಹೆಣ್ಣು ತಾನಾಗಿಯೆ ಹೋರಾಟ ನಡೆಸಬೇಕಾದ ಅನಿವಾರ್ಯತೆ ಇದೆ. ಮುಕ್ತತೆಯಿಂದ ಸಮಾಜದಲ್ಲಿ ಸ್ವಾಸ್ಥ್ಯವನ್ನು ತರಲು ಸಾಧ್ಯವಿಲ್ಲ. ಮೈ ಚಾಯ್ಸ್ ಸ್ತ್ರೀ ಸ್ವಾತಂತ್ರ್ಯದ ಒಂದು ಸಾಂಕೇತಿಕ ಅಭಿವ್ಯಕ್ತಿ ಎಂದುಕೊಂಡರೆ ಅಭ್ಯಂತರವಿಲ್ಲ, ಹೆಚ್ಚು ಚರ್ಚಿಸಬೇಕಾದ ಅಗತ್ಯವೂ ಇಲ್ಲ.

■ ಮೂಚಿ

## ಮಾತೇ ಮುತ್ತು

★ ನಗುತ್ತಿದ್ದರೆ ಇಡೀ ಜಗತ್ತೇ ನಿಮ್ಮ ಜತೆ ನಗುತ್ತದೆ. ಗೊರಕೆ ಹೊಡೆದರೆ ನೀವೊಬ್ಬರೇ ಹೊಡೆಯುತ್ತೀರಿ.

—ಆ್ಯಂಥನಿ ಬರ್ಗಸ್

★ ಜಗತ್ತು ಎಲ್ಲರನ್ನೂ ಭಗ್ನಗೊಳಿಸುತ್ತದೆ. ಕೆಲವರು ಭಗ್ನಗೊಂಡ ಸ್ಥಳದಲ್ಲೇ ಬಲಿಷ್ಠರಾಗುತ್ತಾರೆ.

—ಅರ್ನೆಸ್ಟ್ ಹೆಮಿಂಗ್‌ವೇ

★ ಪ್ರತಿಯೊಬ್ಬ ಯಶಸ್ವೀ ಪುರುಷನ ಹಿಂದೆ ಒಬ್ಬ ಹೆಣ್ಣು ಕಣ್ಣುಗಳನ್ನು ದುರುಗುಟ್ಟಿಕೊಂಡು ನಿಂತಿರುತ್ತಾಳೆ.

—ಜಿಮ್ ಕ್ಯಾರಿ

★ ಒಂದು ಹೂವು ಅರಳುವ ಪವಾಡವನ್ನು ನಾವು ಸ್ಪಷ್ಟವಾಗಿ ನೋಡಿದರೂ ಸಾಕು, ನಮ್ಮ ಇಡೀ ಜೀವನ ಬದಲಾಗುತ್ತದೆ.

—ಗೌತಮ ಬುದ್ಧ

★ ಮಹಿಳೆಯರು ಇರುವುದೇ ಪ್ರೀತಿಸಲು; ಅರ್ಥ ಮಾಡಿಕೊಳ್ಳಲು ಅಲ್ಲ.

—ಆಸ್ಕರ್ ವೈಲ್ಡ್

★ ದಾರಿ ಕರೆದೊಯ್ದಲ್ಲಿಗೆ ಹೋಗಬೇಡಿ. ಎಲ್ಲಿ ದಾರಿ ಇಲ್ಲವೋ ಅಲ್ಲಿ ನಡೆಯುತ್ತಾ ಹೊಸ ಪ್ರಯೋಗಗಳನ್ನು ಮಾಡಿ.

-ರಾಲ್ಫ್ ಎಮರ್ಸನ್

★ ಪ್ರಜಾಪ್ರಭುತ್ವವೇ ಒಳ್ಳೆಯದು. ಇತರ ಎಲ್ಲ ವ್ಯವಸ್ಥೆಗಳೂ ಕೆಟ್ಟದ್ದಾಗಿರುವುದರಿಂದ ಇದನ್ನು ಹೇಳಬೇಕಾಗಿದೆ.

-ಜವಾಹರಲಾಲ್ ನೆಹರೂ

★ ಆರ್ಕೆಸ್ಟ್ರಾದ ನೇತೃತ್ವ ವಹಿಸಿದವನು ಜನಜಂಗುಳಿಗೆ ಬೆನ್ನು ಹಾಕಿರಲೇಬೇಕು.

-ಜೇಮ್ಸ್ ಕ್ರೂಕ್

★ ಜನರಿಗೆ ಏನು ಮಾಡಬೇಕೆಂದು ಹೇಳಿ; ಹೇಗೆ ಮಾಡಬೇಕೆಂದು ಹೇಳಬೇಡಿ. ಆಗ ಅವರು ತಮ್ಮ ನೈಜ ಬುದ್ಧಿವಂತಿಕೆಯಿಂದ ಆ ಕೆಲಸ ಮಾಡಿ ನಿಮ್ಮಲ್ಲಿ ಅಚ್ಚರಿ ಹುಟ್ಟಿಸುತ್ತಾರೆ.

-ಜಾರ್ಜ್ ಪ್ಯಾಟನ್

★ ಜೀವನ ಮತ್ತು ಸಾವು ಎರಡೂ ಬಹಳ ಮುಖ್ಯ. ಅವನ್ನು ನೋವಿನಲ್ಲಿ ಮುಳುಗಿಸಬೇಡಿ.

-ಬೋಧಿ ಧರ್ಮ

★ ಕರುಣೆ ಎನ್ನುವುದು ಭಾರತಕ್ಕೆ ಬೇರೆ, ಅಮೆರಿಕಕ್ಕೆ ಬೇರೆಯಲ್ಲ. ಅದು ದೇಶ, ಲಿಂಗ, ಕಾಲಗಳನ್ನೂ ಪ್ರಭಾವಿಸುತ್ತದೆ.

-ದಯಾನಂದ ಸರಸ್ವತಿ

★ ಒಂದೋ ಸೋದರರ ತರಹ ಒಟ್ಟಿಗೇ ಬದುಕುವುದನ್ನು ಕಲಿಯಿರಿ; ಇಲ್ಲವೇ ಮೂರ್ಖರ ತರಹ ಒಟ್ಟಿಗೇ ನಾಶವಾಗಿ.

-ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್